सत्यमेव जयते

ಭಾರತ ಸರ್ಕಾರ

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

# ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮ) ಅಧಿನಿಯಮ, 1992

(1992ರ ಅಧಿನಿಯಮ ಸಂಖ್ಯೆ 41)

[ಫೆಬ್ರವರಿ 23, 2004 ರಂದು ಜಾರಿಯಲ್ಲಿದ್ದಂತೆ]

# THE INFANT MILK SUBSTITUTES, FEEDING BOTTLES AND INFANT FOODS (REGULATION OF PRODUCTION, SUPPLY AND DISTRIBUTION) ACT, 1992

(Act No. 41 of 1992)

[As on 23rd February 2004]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ಇಲಾಖೆ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.
2004

ಭಾರತ ಸರ್ಕಾರ

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

# ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮ) ಅಧಿನಿಯಮ, 1992

(1992ರ ಅಧಿನಿಯಮ ಸಂಖ್ಯೆ 41)

[ಫೆಬ್ರವರಿ 23, 2004 ರಂದು ಜಾರಿಯಲ್ಲಿದ್ದಂತೆ]

# THE INFANT MILK SUBSTITUTES, FEEDING BOTTLES AND INFANT FOODS (REGULATION OF PRODUCTION, SUPPLY AND DISTRIBUTION) ACT, 1992

(Act No. 41 of 1992)

[As on 23rd February 2004]

ಮುನ್ನುಡಿ

23.02.2004 ರಂದು ಇದ್ದಂತೆ, ದಿ ಇನ್‌ಫ್ಯಾಂಟ್ ಮಿಲ್ಕ್ ಸಬ್‌ಸ್ಟಿಟ್ಯೂಟ್ಸ್, ಫೀಡಿಂಗ್ ಬಾಟಲ್ಸ್ ಅಂಡ್ ಇನ್‌ಫ್ಯಾಂಟ್ ಫುಡ್ಸ್ (ರೆಗ್ಯೂಲೇಷನ್ ಆಫ್ ಪ್ರೊಡಕ್ಷನ್, ಸಪ್ಲೈಅಂಡ್ ಡಿಸ್ಟ್ರಿಬ್ಯೂಷನ್) ಆ್ಯಕ್ಟ್, 1992 (1992ರ 41) ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 23.02.2004ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 28ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 10 ರಿಂದ 17ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

ಟಿ.ಕೆ. ವಿಶ್ವನಾಥನ್<br>ಕಾರ್ಯದರ್ಶಿ,<br>ಭಾರತ ಸರ್ಕಾರ.

## PREFACE

This edition of the Infant Milk Substitutes, Feeding Bottles and Infant Foods (Regulation of Production, Supply and Distribution) Act, 1992 (41 of 1992) as on the 23.02.2004 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol 28, dated: 23.02.2004 on pages 10 to 17.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi

T.K. VISWANATHAN<br>Secretary,<br>Government of India.

# ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮ) ಅಧಿನಿಯಮ, 1992

**ವಿಷಯಾನುಕ್ರಮಣಿಕೆ**


| ಪ್ರಕರಣಗಳು: | | ಪುಟ |
|---|---|---|
| 1. | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2. | ಪರಿಭಾಷೆಗಳು | 1 |
| 3. | ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಕ್ಕೆ ಸಂಬಂಧಪಟ್ಟಂತೆ ಕೆಲವು ನಿಷೇಧಗಳು | 2 |
| 4. | ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ಉಪಯೋಗ ಅಥವಾ ಮಾರಾಟಕ್ಕಾಗಿ ಪ್ರೋತ್ಸಾಹಕಗಳ ನಿಷೇಧ | 2 |
| 5. | ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ಅಥವಾ ಅದಕ್ಕೆ ಸಂಬಂಧಪಟ್ಟ ಉಪಕರಣಗಳ ಅಥವಾ ವಸ್ತುಗಳ ದೇಣಿಗೆಗಳು | 2 |
| 6. | ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಶಿಶು ಆಹಾರಗಳ ಕಂಟೇನರುಗಳ ಮತ್ತು ಲೇಬಲ್‌ಗಳ ಮೇಲಣ ಮಾಹಿತಿ | 2 |
| 7. | ಶಿಶುವಿಗೆ ಹಾಲುಣಿಸುವುದಕ್ಕೆ ಸಂಬಂಧಪಟ್ಟ ಶೈಕ್ಷಣಿಕ ಹಾಗೂ ಇತರ ಸಾಮಗ್ರಿಗಳು ಕೆಲವು ವಿವರಗಳನ್ನೊಳಗೊಂಡಿರಬೇಕು | 3 |
| 8. | ಆರೋಗ್ಯ ರಕ್ಷಣಾ ಪದ್ಧತಿ | 4 |
| 9. | ಶಿಶು ಹಾಲಿನ ಬದಲಿ ಉತ್ಪನ್ನಗಳ ಉಪಯೋಗವನ್ನು ಪ್ರೋತ್ಸಾಹಿಸಲು ಆರೋಗ್ಯ ಕಾರ್ಯಕರ್ತರಿಗೆ ಪ್ರೇರೇಪಿಸುವುದು, ಇತ್ಯಾದಿ | 4 |
| 10. | ಶಿಶು ಹಾಲಿನ ಬದಲಿ ಉತ್ಪನ್ನಗಳ ಉತ್ಪಾದನೆ, ಪೂರೈಕೆ, ವಿತರಣೆ ಅಥವಾ ಮಾರಾಟ ಮಾಡುವ ಮಾಲೀಕನ ನೌಕರರಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು | 4 |
| 11. | ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರಗಳ ಗುಣಮಟ್ಟ | 5 |
| 12. | ಪ್ರವೇಶ ಮಾಡುವ ಮತ್ತು ಶೋಧನೆ ಮಾಡುವ ಅಧಿಕಾರಗಳು | 5 |
| 13. | ಶಿಶು ಹಾಲಿನ ಬದಲಿ ಉತ್ಪನ್ನಗಳು ಇತ್ಯಾದಿಗಳನ್ನು ಅಥವಾ ಅವುಗಳ ಕಂಟೇನರುಗಳನ್ನು ವಶಪಡಿಸಿಕೊಳ್ಳುವ ಅಧಿಕಾರ | 5 |
| 14. | ಮುಟ್ಟುಗೋಲು | 5 |
| 15. | ಮುಟ್ಟುಗೋಲಿಗೆ ಬದಲಾಗಿ ಖರ್ಚನ್ನು ಸಂದಾಯ ಮಾಡಲು ಅವಕಾಶ ನೀಡುವ ಅಧಿಕಾರ | 6 |
| 16. | ಮುಟ್ಟುಗೋಲು, ಇತರ ದಂಡನೆಗಳೊಂದಿಗೆ ಹಸ್ತಕ್ಷೇಪ ಮಾಡಬಾರದು | 6 |
| 17. | ನ್ಯಾಯ ನಿರ್ಣಯ | 6 |
| 18. | ವಶಪಡಿಸಿಕೊಂಡ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರ ಅಥವಾ ಅದರ ಕಂಟೇನರ್‌ನ ಒಡೆಯನಿಗೆ ಒಂದು ಅವಕಾಶ ನೀಡುವುದು | 6 |
| 19. | ಅಪೀಲು | 6 |

| | | |
|---|---|---|
| 20. | ದಂಡ | 7 |
| 21. | ಅಪರಾಧಗಳ ಸಂಜ್ಞೇಯತೆ | 7 |
| 22. | ಕಂಪನಿಗಳಿಂದ ಅಪರಾಧಗಳು | 7 |
| 23. | ಅಪರಾಧಗಳು ಸಂಜ್ಞೇಯವಾಗಿರುವುದು ಹಾಗೂ ಜಾಮೀನೀಯವಾಗಿರುವುದು | 8 |
| 24. | ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ | 8 |
| 25. | 1954ರ ಅಧಿನಿಯಮ 37ರ ಅನ್ವಯವನ್ನು ಪ್ರತಿಬಂಧಿಸಿಲ್ಲ | 8 |
| 26. | ನಿಯಮ ರಚನಾಧಿಕಾರ | 8 |

# ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮ) ಅಧಿನಿಯಮ, 1992

[1992ರ ಅಧಿನಿಯಮ ಸಂಖ್ಯೆ 41]

[29ನೇ ಡಿಸೆಂಬರ್, 1992]

ಎದೆ ಹಾಲು ಉಣಿಸುವ ರೂಢಿಯ ರಕ್ಷಣೆ ಮತ್ತು ಅದಕ್ಕೆ ಉತ್ತೇಜನ ನೀಡುವ ಹಾಗೂ ಶಿಶು ಆಹಾರಗಳ ಸಮರ್ಪಕ ಬಳಕೆಯನ್ನು ಖಾತ್ರಿಗೊಳಿಸುವ ಉದ್ದೇಶದಿಂದ ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆ - ಇವುಗಳನ್ನು ವಿನಿಯಮಗೊಳಿಸುವ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ನಲವತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಗಳ (ಉತ್ಪಾದನೆ, ಸರಬರಾಜು ಮತ್ತು ವಿತರಣೆಯ ವಿನಿಯಮ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) " ಜಾಹೀರಾತು " ಎಂಬುದರಲ್ಲಿ ಯಾವುದೇ ನೋಟೀಸು, ಸುತ್ತೋಲೆ, ಲೇಬಲ್, ರ್‍ಯಾಪರ್ ಮತ್ತು ಇತರ ದಸ್ತಾವೇಜನ್ನು ಅಥವಾ ಯಾವುದೇ ಬೆಳಕು, ಶಬ್ದ, ಹೊಗೆ ಅಥವಾ ಅನಿಲದ ಮೂಲಕ ಇಲೆಕ್ಟ್ರಾನಿಕ್ ಪ್ರಸರಣದ ಮೂಲಕ ಅಥವಾ ಶ್ರವಣ ಅಥವಾ ದೃಶ್ಯ ಪ್ರಸರಣದ ಮೂಲಕ ಮಾಡಲಾದ ಯಾವುದೇ ದೃಶ್ಯ ನಿರೂಪಣೆ ಅಥವಾ ಪ್ರಕಟಣೆಯನ್ನು ಒಳಗೊಳ್ಳುತ್ತದೆ;

(ಬಿ) " ಕಂಟೇನರ್ " ಎಂದರೆ, ಯಾವುದೇ ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲು ಅಥವಾ ಶಿಶು ಆಹಾರವನ್ನು ಇಡಲು ಅಥವಾ ಮಾರಾಟಕ್ಕಾಗಿ ಅಥವಾ ವಿತರಣೆಗಾಗಿ ಪ್ಯಾಕ್ ಮಾಡಲು ಉಪಯೋಗಿಸುವ ಡಬ್ಬಿ, ಬಾಟಲ್, ಗ್ಯಾಸ್ಕೆಟ್, ಟಿನ್, ಕ್ಯಾನ್, ಬ್ಯಾರೆಲ್, ಕೇಸ್, ಟ್ಯೂಬ್, ಪಾತ್ರೆ, ಚೀಲ, ಮೇಲು ಹೊದಿಕೆ ಅಥವಾ ಇತರ ಯಾವುದೇ ವಸ್ತು;

(ಸಿ) " ಫೀಡಿಂಗ್ ಬಾಟಲು " ಎಂದರೆ, ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಶಿಶುವಿಗೆ ಉಣಿಸುವ ಉದ್ದೇಶಕ್ಕಾಗಿ ಉಪಯೋಗಿಸುವ ಯಾವುದೇ ಬಾಟಲು ಅಥವಾ ಪಾತ್ರೆ, ಮತ್ತು ಅಂಥ ಬಾಟಲಿಗೆ ಅಥವಾ ಪಾತ್ರೆಗೆ ಜೋಡಿಸಲು ಬರುವಂತಹ ಅಥವಾ ಜೋಡಿಸಿದ ನಿಪ್ಪಲ್ ಹಾಗೂ ಮುಚ್ಚಳವೂ ಇದರಲ್ಲಿ ಒಳಗೊಳ್ಳುತ್ತದೆ;

(ಡಿ) " ಆರೋಗ್ಯ ರಕ್ಷಣಾ ಪದ್ಧತಿ " ಎಂದರೆ, ತಾಯಂದಿರ, ಶಿಶುಗಳ ಅಥವಾ ಗರ್ಭಿಣಿ ಸ್ತ್ರೀಯರ ಆರೋಗ್ಯ ರಕ್ಷಣಾ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ತೊಡಗಿರುವ ಸಂಸ್ಥೆ ಅಥವಾ ಸಂಘಟನೆ ಮತ್ತು ಖಾಸಗಿಯಾಗಿ ವೃತ್ತಿ ನಡೆಸುತ್ತಿರುವ ಆರೋಗ್ಯ ಕಾರ್ಯಕರ್ತ, ಫಾರ್ಮಸಿ, ಔಷಧದ ಅಂಗಡಿ ಮತ್ತು ಆರೋಗ್ಯ ಕಾರ್ಯಕರ್ತರ ಯಾವುದೇ ಸಂಘ ಇದರಲ್ಲಿ ಒಳಗೊಳ್ಳುತ್ತವೆ;

(ಇ) " ಆರೋಗ್ಯ ಕಾರ್ಯಕರ್ತ " ಎಂದರೆ, ತಾಯಂದಿರ, ಶಿಶುಗಳ ಅಥವಾ ಗರ್ಭಿಣಿ ಸ್ತ್ರೀಯರ ಆರೋಗ್ಯ ರಕ್ಷಣೆಯಲ್ಲಿ ತೊಡಗಿರುವ ವ್ಯಕ್ತಿ;

(ಎಫ್) " ಶಿಶು ಆಹಾರ " ಎಂದರೆ, (ಯಾವುದೇ ಹೆಸರಿನಿಂದ ಕರೆದರೂ ಸರಿಯೇ) ಆರು ತಿಂಗಳ ನಂತರದ ಮತ್ತು ಎರಡು ವರ್ಷಗಳ ವಯಸ್ಸಿನ / ವರೆಗಿನ ಶಿಶುವಿಗೆ, ಹೆಚ್ಚುತ್ತಿರುವ ಸತ್ವಯುತ ಆಹಾರದ ಅಗತ್ಯತೆಗಳನ್ನು ಪೂರೈಸಲು ತಾಯಿಯ ಹಾಲಿಗೆ ಪೂರಕವಾಗಿ ಮಾರಾಟವಾಗುತ್ತಿರುವ ಅಥವಾ ಅನ್ಯಥಾ ತಾಯಿಯ ಹಾಲನ್ನು ಪ್ರತಿನಿಧಿಸುವ ಯಾವುದೇ ಆಹಾರ;

(ಜಿ) " ಶಿಶು ಹಾಲಿನ ಬದಲಿ ಉತ್ಪನ್ನ " ಎಂದರೆ, ತಾಯಿಯ ಹಾಲಿಗೆ ಭಾಗಶಃ ಅಥವಾ ಪೂರ್ಣವಾಗಿ ಬದಲಿ ಆಹಾರವಾಗಿ, ಎರಡು ವರ್ಷಗಳ ವಯಸ್ಸಿನ ವರೆಗಿನ ಶಿಶುವಿಗಾಗಿ ಮಾರಾಟ ಮಾಡುತ್ತಿರುವ ಅಥವಾ ಅನ್ಯಥಾ ಪ್ರತಿನಿಧಿಸುವ ಯಾವುದೇ ಆಹಾರ;

(ಹೆಚ್) " ಲೇಬಲ್ " ಎಂದರೆ, ಯಾವುದೇ ಕಂಟೇನರ್ ಮೇಲ್ಭಾಗದಲ್ಲಿ ಅಥವಾ ಅದಕ್ಕೆ ಅಂಟಿಸಿದ ಅಥವಾ ಅದರ ಮೇಲೆ ಕಂಡು ಬರುವ ಲಿಖಿತ, ಗುರುತು ಹಾಕಿದ, ಸ್ಟಾಂಪು ಹಾಕಿದ, ಮುದ್ರಿಸಿದ ಅಥವಾ ಲೇಖಿಸಿದ ಪ್ರದರ್ಶಿತ ವಿಷಯ;

---

* ದಿನಾಂಕ: 1.8.1993 ರಿಂದ ಜಾರಿಗೆ ಬಂದಿದೆ. ಜಿಎಸ್‌ಆರ್ 527(ಇ) ದಿನಾಂಕ: 31.7.1993ರ ಭಾರತ ಸರ್ಕಾರದ ರಾಜಪತ್ರ ನೋಡಿ

(ಐ) " ನಿಯಮಿಸಲಾದುದು " ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಜೆ) "ಪ್ರೋತ್ಸಾಹ" ಎಂದರೆ, ಶಿಶುಹಾಲಿನ ಬದಲಿ ಉತ್ಪನ್ನವನ್ನು, ಫೀಡಿಂಗ್ ಬಾಟಲನ್ನು, ಶಿಶು ಆಹಾರವನ್ನು ಖರೀದಿಸಲು ಅಥವಾ ಉಪಯೋಗಿಸಲು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ವಿಧಾನದ ಮೂಲಕ ಪ್ರೋತ್ಸಾಹಿಸುವ ಯಾರೇ ವ್ಯಕ್ತಿಯನ್ನು ನಿಯೋಜಿಸುವುದು.

(2) ಯಾವುದೇ ಇತರ ಅಧಿನಿಯಮಿತಿಗೆ ಅಥವಾ ಅದರ ಯಾವುದೇ ಉಪಬಂಧಕ್ಕೆ ಈ ಅಧಿನಿಯಮದಲ್ಲಿರುವ ಯಾವುದೇ ಉಲ್ಲೇಖವನ್ನು, ಅಂಥ ಅಧಿನಿಯಮಿತಿಯು ಅಥವಾ ಅಂಥ ಉಪಬಂಧವು ಜಾರಿಯಲ್ಲಿಲ್ಲದಂಥ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಆ ಪ್ರದೇಶದಲ್ಲಿ ಸಂವಾದಿ ಕಾನೂನು ಯಾವುದಾದರೂ ಜಾರಿಯಲ್ಲಿದ್ದರೆ ಆ ಕಾನೂನಿಗೆ ಅಥವಾ ಅದರ ಸುಸಂಬದ್ಧವಾದ ಉಪಬಂಧಕ್ಕೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

3. ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಮತ್ತು ಶಿಶು ಆಹಾರಕ್ಕೆ ಸಂಬಂಧಪಟ್ಟಂತೆ ಕೆಲವು ನಿಷೇಧಗಳು:- ಯಾರೇ ವ್ಯಕ್ತಿಯು,-

(ಎ) ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ವಿತರಣೆ, ಮಾರಾಟ ಅಥವಾ ಸರಬರಾಜು - ಇವುಗಳನ್ನು ಕುರಿತು ಜಾಹೀರಾತು ಮಾಡತಕ್ಕದ್ದಲ್ಲ, ಅಥವಾ ಯಾವುದೇ ಅಂಥ ಜಾಹೀರಾತಿನ ಪ್ರಕಟಣೆಯಲ್ಲಿ ಭಾಗವಹಿಸತಕ್ಕದ್ದಲ್ಲ; ಅಥವಾ

(ಬಿ) ಶಿಶು ಹಾಲಿನ ಬದಲಿ ಉತ್ಪನ್ನಗಳು ಮತ್ತು ಶಿಶು ಆಹಾರಗಳು ತಾಯಿಯ ಹಾಲಿಗೆ ಸಮಾನವೆಂಬ ಅಥವಾ ಅದಕ್ಕಿಂತ ಹೆಚ್ಚು ಉತ್ತಮವೆಂಬ ಯಾವುದೇ ರೀತಿಯ ಭಾವನೆಯನ್ನು ಉಂಟು ಮಾಡತಕ್ಕದ್ದಲ್ಲ ಅಥವಾ ಅಂಥ ನಂಬಿಕೆ ಹುಟ್ಟಿಸತಕ್ಕದ್ದಲ್ಲ; ಅಥವಾ

(ಸಿ) ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ಬಗ್ಗೆ ಪ್ರೋತ್ಸಾಹಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸತಕ್ಕದ್ದಲ್ಲ.

4. ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ಉಪಯೋಗ ಅಥವಾ ಮಾರಾಟಕ್ಕಾಗಿ ಪ್ರೋತ್ಸಾಹಕಗಳ ನಿಷೇಧ:- ಯಾರೇ ವ್ಯಕ್ತಿಯು, ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳನ್ನು ಅಥವಾ ಶಿಶು ಆಹಾರಗಳನ್ನು ಮಾರಾಟ ಮಾಡುವ ಅಥವಾ ಬಳಸುವ ಉದ್ದೇಶಕ್ಕಾಗಿ,-

(ಎ) ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ಮಾದರಿಗಳು ಅಥವಾ ಪಾತ್ರೆ ಅಥವಾ ಇತರ ವಸ್ತುಗಳ ಕಾಣಿಕೆಗಳನ್ನು ಪೂರೈಸತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ; ಅಥವಾ

(ಬಿ) ಯಾರೇ ಗರ್ಭಿಣಿ ಸ್ತ್ರೀಯನ್ನು ಅಥವಾ ಶಿಶುವಿನ ತಾಯಿಯನ್ನು ಭೇಟಿ ಮಾಡತಕ್ಕದ್ದಲ್ಲ; ಅಥವಾ

(ಸಿ) ಬೇರೆ ಇನ್ನಾವುದೇ ರೀತಿಯಲ್ಲಿ ಮನವೊಲಿಸತಕ್ಕದ್ದಲ್ಲ.

5. ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ಅಥವಾ ಅದಕ್ಕೆ ಸಂಬಂಧಪಟ್ಟ ಉಪಕರಣಗಳ ಅಥವಾ ವಸ್ತುಗಳ ದೇಣಿಗೆಗಳು:- 8ನೇ ಪ್ರಕರಣದ (4)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾರೇ ವ್ಯಕ್ತಿಯು,-

(ಎ) ಅನಾಥಾಲಯವೊಂದನ್ನು ಹೊರತುಪಡಿಸಿ ಇತರ ಯಾರೇ ವ್ಯಕ್ತಿಗೆ ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಅಥವಾ ಫೀಡಿಂಗ್ ಬಾಟಲುಗಳನ್ನು ಅಥವಾ ಶಿಶು ಆಹಾರಗಳನ್ನು ದೇಣಿಗೆಯಾಗಿ ಕೊಡತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ;

(ಬಿ) ಶಿಶು ಹಾಲಿನ ಬದಲಿ ಉತ್ಪನ್ನಗಳಿಗೆ ಅಥವಾ ಫೀಡಿಂಗ್ ಬಾಟಲುಗಳಿಗೆ ಅಥವಾ ಶಿಶು ಆಹಾರಗಳಿಗೆ ಸಂಬಂಧಪಟ್ಟ ಯಾವುದೇ ಮಾಹಿತಿ ಅಥವಾ ತಿಳುವಳಿಕೆ ನೀಡುವ ಉಪಕರಣ ಅಥವಾ ಸಾಮಗ್ರಿಯನ್ನು ದೇಣಿಗೆಯಾಗಿ ಕೊಡತಕ್ಕದ್ದಲ್ಲ ಅಥವಾ ವಿತರಣೆ ಮಾಡತಕ್ಕದ್ದಲ್ಲ:

ಪರಂತು, ಈ ಖಂಡದಲ್ಲಿರುವುದು ಯಾವುದೂ, ನಿಯಮಿಸಬಹುದಾದಂಥ ಷರತ್ತುಗಳು ಮತ್ತು ನಿಬಂಧನೆಗಳಿಗೊಳಪಟ್ಟು, ಆರೋಗ್ಯ ರಕ್ಷಣಾ ಪದ್ಧತಿಯ ಮೂಲಕ ಅಂಥ ಉಪಕರಣ ಅಥವಾ ಸಾಮಗ್ರಿಗಳ ದೇಣಿಗೆಗೆ ಅಥವಾ ವಿತರಣೆಗೆ ಅನ್ವಯವಾಗತಕ್ಕದ್ದಲ್ಲ.

6. ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಶಿಶು ಆಹಾರಗಳ ಕಂಟೇನರುಗಳ ಮತ್ತು ಲೇಬಲ್‌ಗಳ ಮೇಲಣ ಮಾಹಿತಿ:- (1) ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, 1954ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಬಾಧಕವಾಗದಂತೆ ಯಾವುದೇ ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಅಥವಾ ಶಿಶು ಆಹಾರವನ್ನು, ಅದರ ಪ್ರತಿಯೊಂದು ಕಂಟೇನರ್ ಅಥವಾ ಅದಕ್ಕೆ ಲಗತ್ತಿಸಿದ ಯಾವುದೇ ಲೇಬಲ್‌ನ ಮೇಲೆ ನಿಯಮಿಸಬಹುದಾದಂಥ ಭಾಷೆಯಲ್ಲಿ, ದಪ್ಪ ಅಕ್ಷರಗಳಲ್ಲಿ "ಮಹತ್ವದ ಸೂಚನೆ" ಎಂಬ ಪದಗಳನ್ನು ಸ್ಪಷ್ಟವಾಗಿ, ಎದ್ದುಕಾಣುವಂತೆ ಮತ್ತು ಸುಲಭವಾಗಿ ಓದಬಹುದಾದಂತೆ, ಮತ್ತು ತಿಳಿಯುವ ರೀತಿಯಲ್ಲಿ ಸೂಚಿಸಿದ್ದ ಹೊರತು ಮತ್ತು ಅದರ ಕೆಳಗಡೆಗೆ ಈ ಮುಂದಿನ ವಿವರಗಳನ್ನು ಅದೇ ಭಾಷೆಯಲ್ಲಿ ಸೂಚಿಸಿರದ ಹೊರತು ಯಾವ ವ್ಯಕ್ತಿಯೂ ಅದರ ಉತ್ಪಾದನೆ, ಪೂರೈಕೆ ಅಥವಾ ವಿತರಣೆಯನ್ನು ಮಾಡತಕ್ಕದ್ದಲ್ಲ, ಎಂದರೆ:-

(ಎ) ದಪ್ಪಕ್ಷರಗಳಲ್ಲಿ " ತಾಯಿಯ ಹಾಲು ನಿಮ್ಮ ಮಗುವಿಗೆ ಅತ್ಯುತ್ತಮ ಆಹಾರ " ಎಂಬ ವಿವರಣೆ;

(ಬಿ) ಆರೋಗ್ಯ ಕಾರ್ಯಕರ್ತನ ಸಲಹೆಯ ಮೇರೆಗೆ ಮಾತ್ರ ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಅಥವಾ ಶಿಶು ಆಹಾರವನ್ನು ಆ ಮಗುವಿಗೆ ಉಪಯೋಗಿಸುವುದು ಅವಶ್ಯಕವಾಗಿದೆ ಮತ್ತು ಅದರ ಉಪಯೋಗದ ಸರಿಯಾದ ರೀತಿ - ಇವುಗಳ ವಿವರಣೆ;

(ಸಿ) ಶಿಶು ಹಾಲಿನ ಬದಲಿ ಉತ್ಪನ್ನವು ಅಥವಾ ಶಿಶು ಆಹಾರವು ಶಿಶುವಿನ ಸತ್ವಯುತ ಆಹಾರದ ಏಕಮಾತ್ರ ಆಧಾರವಲ್ಲವೆಂಬ ಎಚ್ಚರಿಕೆ;

(ಡಿ) ಅದನ್ನು ಸರಿಯಾಗಿ ತಯಾರಿಸಲು ಸೂಚನೆಗಳು ಮತ್ತು ಅದನ್ನು ಅಸಮರ್ಪಕವಾಗಿ ತಯಾರಿಸುವುದರಿಂದ ಆರೋಗ್ಯದ ಮೇಲೆ ಉಂಟಾಗುವ ಹಾನಿಗಳನ್ನು ಕುರಿತ ಎಚ್ಚರಿಕೆ;

(ಇ) ಉಪಯೋಗಿಸಲಾದ ಸಾಮಗ್ರಿಗಳು;

(ಎಫ್) ಸಂಮಿಶ್ರಣ ಅಥವಾ ವಿಶ್ಲೇಷಣೆ;

(ಜಿ) ದಾಸ್ತಾನು ಮಾಡಲು ಅಗತ್ಯವಾದ ಸ್ಥಿತಿಗತಿಗಳು;

(ಎಚ್) ಆ ದೇಶದ ಹವಾಮಾನ ಹಾಗೂ ದಾಸ್ತಾನಿನ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿಕೊಂಡು, ಅದರ ಬ್ಯಾಚ್ ನಂಬರು, ಉತ್ಪಾದನೆಯ ದಿನಾಂಕ ಹಾಗೂ ಯಾವ ದಿನಾಂಕದೊಳಗಾಗಿ ಅದನ್ನು ಬಳಸಬೇಕು ಎಂಬ ವಿವರಗಳು;

(ಐ) ನಿಯಮಿಸಬಹುದಾದಂಥ ಇತರ ಯಾವುದೇ ವಿವರಗಳು.

(2) ಶಿಶು ಹಾಲಿನ ಬದಲಿ ಉತ್ಪನ್ನಗಳಿಗೆ ಅಥವಾ ಶಿಶು ಆಹಾರಗಳಿಗೆ ಸಂಬಂಧಪಟ್ಟಂತೆ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಕಂಟೇನರು ಅಥವಾ ಲೇಬಲ್ ಈ ಮುಂದಿನ ಅಂಶಗಳನ್ನು ಹೊಂದಿರತಕ್ಕುದಲ್ಲ, ಎಂದರೆ,-

(ಎ) ಶಿಶು ಅಥವಾ ಮಹಿಳೆ ಅಥವಾ ಇವರಿಬ್ಬರ ಚಿತ್ರಗಳು; ಅಥವಾ

(ಬಿ) ಶಿಶು ಹಾಲಿನ ಬದಲಿ ಉತ್ಪನ್ನದ ಅಥವಾ ಶಿಶು ಆಹಾರದ ಮಾರಾಟ ಸಾಮರ್ಥ್ಯವನ್ನು ಹೆಚ್ಚಿಸಲು ಚಿತ್ರಗಳ ಅಥವಾ ರೇಖಾಂಕಿತ ಸಾಮಗ್ರಿ ಅಥವಾ ಬೇರೆ ಇನ್ಯಾವುದೇ ನುಡಿಗಟ್ಟುಗಳನ್ನೊಳಗೊಂಡ ವಿನ್ಯಾಸ; ಅಥವಾ

(ಸಿ) ಅದರ ಮೇಲೆ " ಎದೆ ಹಾಲನ್ನು ಹೋಲುವಂತೆ ತಯಾರಿಸಿದ ಹಾಲು " (ಹುಮನೈಜಡ್) ಅಥವಾ " ತಾಯಿಯ ಹಾಲನ್ನು ಹೋಲುವಂತೆ ತಯಾರಿಸಿದ ಹಾಲು " (ಮೆಟರ್ನಲೈಜಡ್) ಅಥವಾ ಅದೇ ರೀತಿಯ ಇತರ ಯಾವುದೇ ಪದ; ಅಥವಾ

(ಡಿ) ಅದರ ಮೇಲೆ ನಿಯಮಿಸಬಹುದಾದಂಥ ಇತರ ವಿವರಗಳು.

7. ಶಿಶುವಿಗೆ ಹಾಲುಣಿಸುವುದಕ್ಕೆ ಸಂಬಂಧಪಟ್ಟ ಶೈಕ್ಷಣಿಕ ಹಾಗೂ ಇತರ ಸಾಮಗ್ರಿಗಳು ಕೆಲವು ವಿವರಗಳನ್ನೊಳಗೊಂಡಿರಬೇಕು:- (1) ಮಗು ಜನಿಸುವುದಕ್ಕೆ ಮೊದಲು ಅಥವಾ ಜನಿಸಿದ ನಂತರದ ಆರೈಕೆ ಬಗ್ಗೆ ಅಥವಾ ಶಿಶುವಿಗೆ ಆಹಾರ ಕೊಡುವುದರ ಬಗೆಗೆ ಮತ್ತು ಗರ್ಭಿಣಿ ಸ್ತ್ರೀಯರಿಗೆ ಅಥವಾ ಶಿಶುವಿನ ತಾಯಂದಿರಿಗೆ ತಿಳುವಳಿಕೆ ನೀಡಲು, ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲ್‌ಗಳು ಮತ್ತು ಶಿಶು ಆಹಾರಗಳ ಪ್ರೋತ್ಸಾಹ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಜಾಹಿರಾತುಗಳನ್ನು ಅಥವಾ ಸಾಮಗ್ರಿಯನ್ನು ಒಳಗೊಂಡಂತೆ ಪ್ರತಿಯೊಂದು ಶೈಕ್ಷಣಿಕ ಅಥವಾ ಇತರ ಸಾಮಗ್ರಿಗಳು, ಅವು ಶ್ರವ್ಯವಾಗಿರಲಿ ಅಥವಾ ದೃಶ್ಯವಾಗಿರಲಿ - ಈ ಮುಂದಿನ ವಿಷಯಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನೊಳಗೊಂಡಿರತಕ್ಕದ್ದು, ಎಂದರೆ:-

(ಎ) ಎದೆ ಹಾಲುಣಿಸುವ ಪ್ರಯೋಜನಗಳು ಹಾಗೂ ಅದರ ಮಹತ್ವ;

(ಬಿ) ಎದೆ ಹಾಲುಣಿಸುವಿಕೆಗೆ ಸಿದ್ಧತೆ ಮತ್ತು ಅದರ ಮುಂದುವರಿಕೆ;

(ಸಿ) ಭಾಗಶಃ ಬಾಟಲಿನಿಂದ ಹಾಲುಣಿಸುವಿಕೆಯನ್ನು ಪ್ರಾರಂಭ ಮಾಡುವ ಕಾರಣ ಎದೆ ಹಾಲುಣಿಸುವುದರ ಮೇಲೆ ಆಗುವ ಹಾನಿಕರ ಪರಿಣಾಮಗಳು;

(ಡಿ) ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಕೆಲವು ಕಾಲ ಉಣಿಸಿ, ಆ ನಂತರ ಶಿಶುಗಳಿಗೆ ಎದೆ ಹಾಲುಣಿಸುವುದನ್ನು ಪುನಃ ಪ್ರಾರಂಭಿಸುವಲ್ಲಿ ಆಗುವ ತೊಂದರೆಗಳು;

(ಇ) ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಮತ್ತು ಫೀಡಿಂಗ್ ಬಾಟಲುಗಳನ್ನು ಉಪಯೋಗಿಸುವಲ್ಲಿ ಉಂಟಾಗುವ ಆರ್ಥಿಕ ಮತ್ತು ಸಾಮಾಜಿಕ ತೊಡಕುಗಳು;

(ಎಫ್) ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಮತ್ತು ಫೀಡಿಂಗ್ ಬಾಟಲುಗಳನ್ನು ಸರಿಯಾಗಿ ಉಪಯೋಗಿಸದೇ ಇದ್ದಲ್ಲಿ ಆರೋಗ್ಯದ ಮೇಲೆ ಉಂಟಾಗುವ ಅಪಾಯಗಳು;

(ಎಫ್ಎ) ಅಂಥ ಸಾಮಗ್ರಿಗಳ ಮುದ್ರಣ ಮತ್ತು ಪ್ರಕಟಣೆಯ ದಿನಾಂಕ ಮತ್ತು ಮುದ್ರಕರ ಮತ್ತು ಪ್ರಕಾಶಕರ ಹೆಸರು;

(ಜಿ) ನಿಯಮಿಸಬಹುದಾದಂಥ ಇತರ ವಿಷಯಗಳು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವ ಸಾಮಗ್ರಿಯನ್ನೂ, ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರದ ಉಪಯೋಗ ಅಥವಾ ಮಾರಾಟವನ್ನು ಪ್ರೋತ್ಸಾಹಿಸಲು ಉಪಯೋಗ ಮಾಡಿಕೊಳ್ಳತಕ್ಕದ್ದಲ್ಲ.

8. ಆರೋಗ್ಯ ರಕ್ಷಣಾ ಪದ್ಧತಿ:- (1) ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರಗಳ ಉಪಯೋಗ ಅಥವಾ ಮಾರಾಟವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕಾಗಿ, ಆ ಸಾಮಗ್ರಿಗಳ ವಿತರಣೆಗೆ ಸಂಬಂಧಪಟ್ಟ ಪ್ರಕಟಣಾ ಪತ್ರಗಳ ಅಥವಾ ಭಿತ್ತಿ ಪತ್ರಗಳ ಪ್ರದರ್ಶನಕ್ಕಾಗಿ ಯಾವುದೇ ಆರೋಗ್ಯ ರಕ್ಷಣಾ ಪದ್ಧತಿಯನ್ನು, ಯಾವ ವ್ಯಕ್ತಿಯೂ ಬಳಸಿಕೊಳ್ಳತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಉಪಬಂಧಗಳು ಈ ಮುಂದಿನವುಗಳಿಗೆ ಅನ್ವಯವಾಗತಕ್ಕದ್ದಲ್ಲ,-

(ಎ) 5ನೇ ಪ್ರಕರಣದ (ಬಿ) ಖಂಡದ ಪರಂತುಕಕ್ಕೆ ಅನುಸಾರವಾಗಿ ತಯಾರಿಸಲಾದ ಮಾಹಿತಿಯುಕ್ತ ಅಥವಾ ಶೈಕ್ಷಣಿಕ ಸಲಕರಣೆ ಅಥವಾ ಸಾಮಗ್ರಿಯನ್ನು ದೇಣಿಗೆಯಾಗಿ ನೀಡುವುದು ಅಥವಾ ವಿತರಿಸುವುದು; ಮತ್ತು

(ಬಿ) 7ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮಾಹಿತಿಯೊಂದಿಗೆ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶುವಿನ ಆಹಾರದ ಉಪಯೋಗಕ್ಕೆ ಸಂಬಂಧಪಟ್ಟ ವೈಜ್ಞಾನಿಕ ಮತ್ತು ವಾಸ್ತವಿಕ ವಿಷಯಗಳ ಬಗ್ಗೆ ಆರೋಗ್ಯ ಕಾರ್ಯಕರ್ತನಿಗೆ ಮಾಹಿತಿಯನ್ನು ಪ್ರಸಾರ ಮಾಡುವುದು;

(2) ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರಗಳನ್ನು ಉತ್ಪಾದಿಸುವ, ಪೂರೈಸುವ, ವಿತರಿಸುವ ಅಥವಾ ಮಾರುವಂಥ ಯಾರೇ ವ್ಯಕ್ತಿಯು, ಅಂಥ ಉತ್ಪನ್ನಗಳು ಅಥವಾ ಬಾಟಲುಗಳು ಅಥವಾ ಆಹಾರೋತ್ಪನ್ನಗಳ ಉಪಯೋಗ ಅಥವಾ ಮಾರಾಟವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕಾಗಿ ಆರೋಗ್ಯ ರಕ್ಷಣಾ ಪದ್ಧತಿಯಲ್ಲಿ ಕಾರ್ಯನಿರ್ವಹಿಸುವಂಥ ಯಾರೇ ವ್ಯಕ್ತಿಗೆ ಯಾವುದೇ ಹಣ ಸಂದಾಯವನ್ನು ಮಾಡತಕ್ಕದ್ದಲ್ಲ.

(3) ಆರೋಗ್ಯ ಕಾರ್ಯಕರ್ತನಲ್ಲದ ಬೇರೆ ಯಾರೇ ವ್ಯಕ್ತಿಯು ಶಿಶುವಿನ ತಾಯಿಗೆ ಅಥವಾ ಆಕೆಯ ಕುಟುಂಬದ ಯಾರೇ ಸದಸ್ಯರಿಗೆ ಶಿಶು ಹಾಲಿನ ಬದಲಿ ಉತ್ಪನ್ನಗಳನ್ನು ಅಥವಾ ಶಿಶು ಆಹಾರಗಳನ್ನು ತಿನ್ನಿಸುತ್ತಿರುವ ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸತಕ್ಕದ್ದಲ್ಲ ಮತ್ತು ಅಂಥ ಆರೋಗ್ಯ ಕಾರ್ಯಕರ್ತನು, ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರಗಳನ್ನು ಸರಿಯಾಗಿ ಉಪಯೋಗಿಸದೇ ಇದ್ದಲ್ಲಿ ಉಂಟಾಗುವ ಅಪಾಯಗಳ ಬಗ್ಗೆ ಅಂಥ ತಾಯಂದಿರಿಗೆ ಅಥವಾ ಅಂಥ ಉಳಿದ ಸದಸ್ಯರಿಗೆ ಸ್ಪಷ್ಟವಾಗಿ ವಿವರಿಸತಕ್ಕದ್ದು.

(4) ತಾಯಂದಿರಿಗೆ, ಶಿಶುಗಳಿಗೆ ಅಥವಾ ಗರ್ಭಿಣಿ ಸ್ತ್ರೀಯರಿಗೆ ಆರೋಗ್ಯ ರಕ್ಷಣೆಯ ಬಗ್ಗೆ ವಿವರಿಸುವ ಕಾರ್ಯದಲ್ಲಿ ನಿರತವಾಗಿರುವ ಒಂದು ಸಂಸ್ಥೆ ಅಥವಾ ಸಂಘಟನೆಯ ಹೊರತು, ಇತರ ಯಾರೇ ವ್ಯಕ್ತಿಯು, ಎದೆ ಹಾಲುಣಿಸಲಾರದ, ಮತ್ತು ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳನ್ನು ಖರೀದಿಸಲು ಅಸಮರ್ಥರಾಗಿರುವ ತಾಯಂದಿರಿಗೆ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳನ್ನು ವಿತರಿಸತಕ್ಕದ್ದಲ್ಲ.

(5) ಒಂದು ಅನಾಥಾಲಯವು ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳನ್ನು, ಅವುಗಳ ಮಾರಾಟದ ಬೆಲೆಗಿಂತ ಕಡಿಮೆ ಬೆಲೆಗೆ, ಸದರಿ ಅನಾಥಾಲಯದಲ್ಲಿ ಅವುಗಳನ್ನು ಉಪಯೋಗಿಸುವ ಉದ್ದೇಶಕ್ಕಾಗಿ ಖರೀದಿಸಬಹುದು.

ವಿವರಣೆ:- ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಅಂಥ ಖರೀದಿಗಳು, ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳ ಉಪಯೋಗ ಅಥವಾ ಮಾರಾಟವನ್ನು ಪ್ರೋತ್ಸಾಹಕ್ಕೆ ಮಾಡಿದ ಪ್ರೇರೇಪಣೆ ಆಗಬಾರದು.

9. ಶಿಶು ಹಾಲಿನ ಬದಲಿ ಉತ್ಪನ್ನಗಳ ಉಪಯೋಗವನ್ನು ಪ್ರೋತ್ಸಾಹಿಸಲು ಆರೋಗ್ಯ ಕಾರ್ಯಕರ್ತರಿಗೆ ಪ್ರೇರೇಪಿಸುವುದು, ಇತ್ಯಾದಿ:- (1) ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರವನ್ನು ಉತ್ಪಾದಿಸುವ, ಪೂರೈಸುವ ಅಥವಾ ವಿತರಿಸುವ ಅಥವಾ ಮಾರುವ ಯಾರೇ ವ್ಯಕ್ತಿಯು, ಅಂಥ ಬದಲಿ ಹಾಲು ಉತ್ಪನ್ನಗಳು ಅಥವಾ ಬಾಟಲುಗಳು ಅಥವಾ ಆಹಾರದ ಉಪಯೋಗವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕಾಗಿ ಆರೋಗ್ಯ ಕಾರ್ಯಕರ್ತನಿಗೆ ಅಥವಾ ಅವನ ಕುಟುಂಬದ ಯಾರೇ ಸದಸ್ಯನಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಹಣಕಾಸಿನ ಪ್ರಲೋಭನೆ ಒಡ್ಡತಕ್ಕದ್ದಲ್ಲ ಅಥವಾ ಕೊಡುಗೆ ನೀಡತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾರೇ ಉತ್ಪಾದಕರು, ಪೂರೈಕೆದಾರರು ಅಥವಾ ವಿತರಕರು, ವಿಚಾರಗೋಷ್ಠಿಗೆ, ಸಭೆಗೆ, ಸಮ್ಮೇಳನಕ್ಕೆ, ಶೈಕ್ಷಣಿಕ ಕೋರ್ಸ್‌ಗೆ, ಸ್ಪರ್ಧೆಗೆ, ಫೆಲೋಶಿಪ್‌ಗೆ ಅಥವಾ ಪ್ರಾಯೋಜಕತ್ವಕ್ಕೆ ಧನ ಸಹಾಯ ಮಾಡುವುದೂ ಒಳಗೊಂಡಂತೆ ಆರೋಗ್ಯ ಕಾರ್ಯಕರ್ತನಿಗೆ ಅಥವಾ ಆರೋಗ್ಯ ಕಾರ್ಯಕರ್ತರ ಸಂಘಕ್ಕೆ ಯಾವುದೇ ಕೊಡುಗೆ ಅಥವಾ ಹಣಕಾಸಿನ ಪ್ರಯೋಜನವನ್ನು ಕೊಡಮಾಡತಕ್ಕದ್ದಲ್ಲ ಅಥವಾ ಕೊಡತಕ್ಕದ್ದಲ್ಲ.

10. ಶಿಶು ಹಾಲಿನ ಬದಲಿ ಉತ್ಪನ್ನಗಳ ಉತ್ಪಾದನೆ, ಪೂರೈಕೆ, ವಿತರಣೆ ಅಥವಾ ಮಾರಾಟ ಮಾಡುವ ಮಾಲೀಕನ ನೌಕರರಿಗೆ ಸಂಬಂಧಪಟ್ಟ ವಿಶೇಷ ಉಪಬಂಧ:- (1) ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಆಹಾರಗಳನ್ನು ಉತ್ಪಾದಿಸುವ, ಪೂರೈಸುವ, ವಿತರಣೆ ಮಾಡುವ ಅಥವಾ ಮಾರಾಟ ಮಾಡುವಂಥ ಯಾರೇ ವ್ಯಕ್ತಿಯು, ತನ್ನ ನೌಕರನು ತಯಾರಿಸಿದಂಥ ಬದಲಿ ಹಾಲು ಉತ್ಪನ್ನಗಳು ಅಥವಾ ಬಾಟಲುಗಳು ಅಥವಾ ಆಹಾರಗಳನ್ನು ಅಂಥ ನೌಕರರು ಮಾಡಿದ ಮಾರಾಟದ ಪರಿಮಾಣದ ಆಧಾರದ ಮೇಲೆ ತನ್ನ ಯಾರೇ ನೌಕರನಿಗೆ ಪರಿಶ್ರಮ ಧನವನ್ನು ನಿಗದಿಪಡಿಸತಕ್ಕದ್ದಲ್ಲ ಅಥವಾ ಯಾವುದೇ ಕಮೀಷನ್ ಕೊಡತಕ್ಕದ್ದಲ್ಲ.

(2) ಅಂಥ ವ್ಯಕ್ತಿಯ ನೌಕರರು, ಗರ್ಭಿಣಿ ಸ್ತ್ರೀ ಅಥವಾ ಶಿಶುವಿನ ತಾಯಿಗೆ, ಶಿಶುವಿನ ಜನನಕ್ಕಿಂತ ಮೊದಲು ಅಥವಾ ಜನಿಸಿದ ನಂತರ ಶಿಶುವಿನ ಆರೈಕೆಯ ಬಗ್ಗೆ ಅರಿವು ಮೂಡಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕಾರ್ಯ ನಿರ್ವಹಿಸತಕ್ಕದ್ದಲ್ಲ.

11. ಶಿಶು ಹಾಲಿನ ಬದಲಿ ಉತ್ಪನ್ನಗಳು, ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರಗಳ ಗುಣಮಟ್ಟ:- (1) ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, 1954 (1954ರ 37) ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಅಂಥ ಬದಲಿ ಉತ್ಪನ್ನ ಅಥವಾ ಆಹಾರಗಳು ನಿರ್ದಿಷ್ಟಪಡಿಸಲಾದ ಗುಣಮಟ್ಟಗಳಿಗನುಗುಣವಾಗಿ ಇದ್ದ ಹೊರತು ಮತ್ತು ಅವುಗಳ ಕಂಟೇನರು, ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಶಿಶು ಆಹಾರವು ಅಂಥ ಗುಣಮಟ್ಟಕ್ಕೆ ಅನುಗುಣವಾಗಿದೆ ಎಂದು ಸೂಚಿಸಲು ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986ರ (1986ರ 63) 3ನೇ ಪ್ರಕರಣದ ಮೇರೆಗೆ ಸ್ಥಾಪನೆಯಾದ ಭಾರತೀಯ ಮಾನಕ ಸಂಸ್ಥೆಯು ನಿರ್ದಿಷ್ಟಪಡಿಸಿದ ಸುಸಂಬದ್ಧ ಗುಣಮಟ್ಟದ ಚಿಹ್ನೆಯನ್ನು ಹೊಂದಿದ್ದ ಹೊರತು, ಯಾರೇ ವ್ಯಕ್ತಿಯು ಅಂಥ ಯಾವುದೇ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಶಿಶು ಆಹಾರಗಳನ್ನು ಮಾರುವುದು ಅಥವಾ ಅನ್ಯಥಾ ವಿತರಿಸುವುದನ್ನು ಮಾಡತಕ್ಕದ್ದಲ್ಲ:

ಪರಂತು, ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, 1954ರ ಮೇರೆಗೆ ಯಾವುದೇ ಶಿಶು ಹಾಲಿನ ಬದಲಿ ಉತ್ಪನ್ನಗಳಿಗೆ ಅಥವಾ ಶಿಶು ಆಹಾರಗಳಿಗೆ ಯಾವುದೇ ಗುಣಮಟ್ಟವನ್ನು ನಿರ್ದಿಷ್ಟಪಡಿಸದಿರುವಲ್ಲಿ, ಅಂಥ ಬದಲಿ ಹಾಲಿನ ಉತ್ಪನ್ನ ಅಥವಾ ಆಹಾರ ಮತ್ತು ಆ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಆಹಾರ ಕಂಟೇನರುಗಳಿಗೆ ಅಂಟಿಸಲಾದ ಲೇಬಲ್ - ಇವುಗಳಿಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯು ಕೇಂದ್ರ ಸರ್ಕಾರದ ಅನುಮೋದನೆ ಪಡೆದ ಹೊರತು ಅಂಥ ಯಾವುದೇ ಬದಲಿ ಹಾಲು ಉತ್ಪನ್ನ ಅಥವಾ ಆಹಾರವನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವಿತರಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಭಾರತೀಯ ಮಾನಕ ಸಂಸ್ಥೆಯು ನಿರ್ದಿಷ್ಟಪಡಿಸಿದ ಗುಣಮಟ್ಟದ ಚಿಹ್ನೆಗೆ ಫೀಡಿಂಗ್ ಬಾಟಲುಗಳು ಅನುಗುಣವಾಗಿದ್ದ ಹೊರತು ಮತ್ತು ಅವುಗಳ ಕಂಟೇನರುಗಳ ಮೇಲೆ ಅಂಥ ಚಿಹ್ನೆಯನ್ನು ಅಂಟಿಸಿದ್ದ ಹೊರತು ಯಾರೇ ವ್ಯಕ್ತಿಯು ಅಂಥ ಯಾವುವೇ ಫೀಡಿಂಗ್ ಬಾಟಲುಗಳನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ಅವುಗಳನ್ನು ವಿತರಿಸತಕ್ಕದ್ದಲ್ಲ.

12. ಪ್ರವೇಶ ಮಾಡುವ ಮತ್ತು ಶೋಧನೆ ಮಾಡುವ ಅಧಿಕಾರಗಳು:- (1) ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, 1954ರ (1954ರ 37) 9ನೇ ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ಆಹಾರ ಪರಿವೀಕ್ಷಕನಿಗೆ (ಇದರಲ್ಲಿ ಇನ್ನು ಮುಂದೆ ಆಹಾರ ಪರಿವೀಕ್ಷಕರೆಂದು ಉಲ್ಲೇಖಿತವಾಗಿದೆ) ಅಥವಾ ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಅಧಿಕೃತಗೊಳಿಸಲಾದ 1ನೇ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಹುದ್ದೆಯಲ್ಲಿರುವ ಯಾರೇ ಅಧಿಕಾರಿಗೆ (ಇದರಲ್ಲಿ ಇನ್ನು ಮುಂದೆ ಅಧಿಕೃತ ಅಧಿಕಾರಿಯೆಂದು ಉಲ್ಲೇಖಿತವಾಗಿದೆ), 6ನೇ ಪ್ರಕರಣದ ಅಥವಾ 11ನೇ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸಲಾಗಿದೆ ಅಥವಾ ಅದರ ಉಲ್ಲಂಘನೆ ಆಗುತ್ತಿದೆ ಎಂದು ನಂಬಲು ಯಾವುದೇ ಕಾರಣವಿದ್ದರೆ, ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರಗಳನ್ನು ಯಾವುದೇ ರೀತಿಯಲ್ಲಿ ಮಾರಾಟ ಮಾಡುವ ಅಥವಾ ವ್ಯಾಪಾರ ಮಾಡುವ ಅಥವಾ ಅಂಥ ಬದಲಿ ಹಾಲು ಉತ್ಪನ್ನಗಳು, ಬಾಟಲುಗಳು ಅಥವಾ ಆಹಾರಗಳ ಉತ್ಪಾದನೆ, ಪೂರೈಕೆ ಅಥವಾ ವಿತರಣೆಯನ್ನು ಮಾಡುವ ಯಾವುದೇ ಕಾರ್ಖಾನೆ, ಕಟ್ಟಡ, ವ್ಯಾಪಾರದ ಮಳಿಗೆ ಅಥವಾ ಯಾವುದೇ ಇತರ ಸ್ಥಳವನ್ನು ಯಾವುದೇ ಸೂಕ್ತ ಸಮಯದಲ್ಲಿ ಅವನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು.

(2) ಶೋಧನೆಗಳು ಮತ್ತು ಅಭಿಗ್ರಹಣಗಳಿಗೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಈ ಅಧಿನಿಯಮದ ಮೇರೆಗೆ ಮಾಡಲಾದ ಪ್ರತಿಯೊಂದು ಶೋಧನೆ ಅಥವಾ ಅಭಿಗ್ರಹಣಕ್ಕೆ ಅನ್ವಯವಾಗತಕ್ಕದ್ದು.

13. ಶಿಶು ಹಾಲಿನ ಬದಲಿ ಉತ್ಪನ್ನಗಳು ಇತ್ಯಾದಿಗಳನ್ನು ಅಥವಾ ಅವುಗಳ ಕಂಟೇನರುಗಳನ್ನು ವಶಪಡಿಸಿಕೊಳ್ಳುವ ಅಧಿಕಾರ:- (1) ಯಾರೇ ಆಹಾರ ಪರಿವೀಕ್ಷಕನಿಗೆ ಅಥವಾ ಅಧಿಕೃತ ಅಧಿಕಾರಿಗೆ, ಯಾವುದೇ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರಕ್ಕೆ ಅಥವಾ ಅದರ ಕಂಟೇನರುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಲಾಗಿದೆ ಅಥವಾ ಉಲ್ಲಂಘಿಸಲಾಗುತ್ತಿದೆ ಎಂದು ನಂಬಲು ಕಾರಣವಿದ್ದರೆ, ಅವನು ಅಂಥ ಬದಲಿ ಹಾಲು ಉತ್ಪನ್ನಗಳು ಅಥವಾ ಬಾಟಲುಗಳು ಅಥವಾ ಆಹಾರ ಅಥವಾ ಅದರ ಕಂಟೇನರನ್ನು ವಶಪಡಿಸಿಕೊಳ್ಳಬಹುದು.

(2) ಅಂಥ ಬದಲಿ ಹಾಲು ಉತ್ಪನ್ನಗಳು ಅಥವಾ ಆಹಾರ ಅಥವಾ ಬಾಟಲು ಅಥವಾ ಕಂಟೇನರನ್ನು ತನ್ನಲ್ಲೇ ಇಟ್ಟುಕೊಳ್ಳುವ ಯಾರೇ ಆಹಾರ ಪರಿವೀಕ್ಷಕನು ಅಥವಾ ಅಧಿಕೃತ ಅಧಿಕಾರಿಯು, ಹಾಗೆ ಇಟ್ಟುಕೊಳ್ಳಲು, ಅಂಥ ಅಭಿಗ್ರಹಣವನ್ನು ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಮಾಡಲಾಗಿದೆಯೋ ಆ ಜಿಲ್ಲಾ ನ್ಯಾಯಾಧೀಶನ ಅನುಮೋದನೆಯನ್ನು ಪಡೆದ ಹೊರತು, ಹಾಗೆ ಅಭಿಗ್ರಹಿಸಿದ ದಿನಾಂಕದಿಂದ ತೊಂಬತ್ತು ದಿನಗಳಿಗೆ ಮೀರಿದ ಅವಧಿಯವರೆಗೆ ಹಾಗೆ ಇಟ್ಟುಕೊಳ್ಳತಕ್ಕದ್ದಲ್ಲ.

14. ಮುಟ್ಟುಗೋಲು:- ಯಾವುದೇ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲುಗಳು ಅಥವಾ ಶಿಶು ಆಹಾರ ಅಥವಾ ಅದರ ಕಂಟೇನರಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದ್ದರೆ ಅಥವಾ ಉಲ್ಲಂಘಿಸಲಾಗುತ್ತಿದ್ದರೆ, ಅವುಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು:

ಪರಂತು, ಯಾವುವೇ ಅಂಥ ಬದಲಿ ಹಾಲು ಉತ್ಪನ್ನಗಳು ಅಥವಾ ಬಾಟಲು ಅಥವಾ ಆಹಾರ ಅಥವಾ ಕಂಟೇನರು ಯಾವ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ಅಧಿಕಾರದಲ್ಲಿ ಅಥವಾ ನಿಯಂತ್ರಣದಲ್ಲಿವೆಯೋ ಆ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು

ಉಲ್ಲಂಘಿಸಿರುವುದಕ್ಕೆ ಜವಾಬ್ದಾರನಲ್ಲವೆಂದು ಮುಟ್ಟುಗೋಲು ಹಾಕಿಕೊಳ್ಳುವ ನ್ಯಾಯ ನಿರ್ಣಯ ಮಾಡುವ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ಕಂಡುಬಂದರೆ, ಆ ನ್ಯಾಯಾಲಯವು, ಅಂಥ ಬದಲಿ ಹಾಲು ಉತ್ಪನ್ನ ಅಥವಾ ಬಾಟಲು ಅಥವಾ ಆಹಾರ ಅಥವಾ ಕಂಟೇನರನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ಆದೇಶ ಮಾಡುವುದಕ್ಕೆ ಬದಲಾಗಿ, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿರುವ ತಪ್ಪಿತಸ್ಥ ವ್ಯಕ್ತಿಯ ವಿರುದ್ಧ ತಾನು ಸೂಕ್ತವೆಂದು ಆಲೋಚಿಸಬಹುದಾದಂತೆ ಈ ಅಧಿನಿಯಮದಿಂದ ಅಧಿಕೃತವಾದಂಥ ಇತರ ಆದೇಶವನ್ನು ಮಾಡಬಹುದು.

15. ಮುಟ್ಟುಗೋಲಿಗೆ ಬದಲಾಗಿ ಖರ್ಚನ್ನು ಸಂದಾಯ ಮಾಡಲು ಅವಕಾಶ ನೀಡುವ ಅಧಿಕಾರ:- (1) ಈ ಅಧಿನಿಯಮದ ಮೂಲಕ ಯಾವುದೇ ಮುಟ್ಟುಗೋಲನ್ನು ಅಧಿಕೃತಗೊಳಿಸಿದಾಗಲೆಲ್ಲಾ, ಮುಟ್ಟುಗೋಲು ಹಾಕಿಕೊಳ್ಳುವ ನ್ಯಾಯ ನಿರ್ಣಯ ಮಾಡುವ ನ್ಯಾಯಾಲಯವು, ಮುಟ್ಟುಗೋಲಿನ ನ್ಯಾಯ ನಿರ್ಣಯದ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಅದರ ಮುಟ್ಟುಗೋಲನ್ನು ಅಧಿಕೃತಗೊಳಿಸಿದ ಸಂಬಂಧದಲ್ಲಿ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲು ಅಥವಾ ಶಿಶು ಆಹಾರ ಅಥವಾ ಕಂಟೇನರ್ - ಇವುಗಳ ಒಡೆಯನಿಗೆ ನ್ಯಾಯಾಲಯವು ಸೂಕ್ತವೆಂದು ಆಲೋಚಿಸುವಂತೆ ಇವುಗಳ ಮೌಲ್ಯವನ್ನು ಮೀರದಷ್ಟು ಖರ್ಚನ್ನು ಸಂದಾಯ ಮಾಡಲು ಒಂದು ಆಯ್ಕೆಯ ಅವಕಾಶವನ್ನು ಕೊಡಬಹುದು.

(2) ನ್ಯಾಯಾಲಯವು ಆದೇಶಿಸಿದ ಖರ್ಚನ್ನು ಸಂದಾಯ ಮಾಡಿದ ತರುವಾಯ, ವಶಪಡಿಸಿಕೊಂಡ ಶಿಶು ಹಾಲಿನ ಬದಲಿ ಉತ್ಪನ್ನಗಳು ಅಥವಾ ಫೀಡಿಂಗ್ ಬಾಟಲು ಅಥವಾ ಶಿಶು ಆಹಾರ ಅಥವಾ ಅದರ ಕಂಟೇನರನ್ನು, ಯಾರಿಂದ ವಶಪಡಿಸಿಕೊಳ್ಳಲಾಗಿತ್ತೋ ಆ ವ್ಯಕ್ತಿಗೆ, ಅಂಥ ಬದಲಿ ಹಾಲು ಉತ್ಪನ್ನ ಅಥವಾ ಬಾಟಲು ಅಥವಾ ಆಹಾರ ಅಥವಾ ಅದರ ಕಂಟೇನರು - ಇದರ ಯಾವುದೇ ವಿತರಣೆ, ಮಾರಾಟ ಅಥವಾ ಪೂರೈಕೆ ಮಾಡುವುದಕ್ಕೆ ಮೊದಲು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು, ಅದನ್ನು ಹಿಂದಿರುಗಿಸತಕ್ಕದ್ದು.

16. ಮುಟ್ಟುಗೋಲು, ಇತರ ದಂಡನೆಗಳೊಂದಿಗೆ ಹಸ್ತಕ್ಷೇಪ ಮಾಡಬಾರದು:- ಈ ಅಧಿನಿಯಮದ ಮೇರೆಗೆ ಹಾಕಿಕೊಂಡ ಮುಟ್ಟುಗೋಲು ಅಥವಾ ಸಂದಾಯ ಮಾಡಬೇಕೆಂದು ಆದೇಶಿಸಿದ ಯಾವುದೇ ಖರ್ಚು, ಅದರಿಂದ ಬಾಧಿತನಾದ ವ್ಯಕ್ತಿಗೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ಅವನು ಗುರಿಯಾಗಬಹುದಾದ ಯಾವುದೇ ದಂಡನೆಯನ್ನು ವಿಧಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

17. ನ್ಯಾಯ ನಿರ್ಣಯ:- (ಎ) ಮೂಲ ಅಧಿಕಾರ ವ್ಯಾಪ್ತಿಯುಳ್ಳ ಯಾವ ಪ್ರಧಾನ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ, ಸಂದರ್ಭಾನುಸಾರ ಅಂಥ ಮುಟ್ಟುಗೋಲನ್ನು ಹಾಕಿಕೊಳ್ಳಲಾಗಿದೆಯೋ ಅಥವಾ ಖರ್ಚನ್ನು ಸಂದಾಯ ಮಾಡುವಂತೆ ಆದೇಶಿಸಲಾಗಿದೆಯೋ ಆ ಪ್ರಧಾನ ಸಿವಿಲ್ ನ್ಯಾಯಾಲಯವು ಯಾವುದೇ ಪರಿಮಿತಿ ಇಲ್ಲದೆ;

(ಬಿ) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದ, ಐದು ಸಾವಿರ ರೂಪಾಯಿಗಳಿಗೂ ಮೀರಿದ ಆರ್ಥಿಕ ಅಧಿಕಾರ ವ್ಯಾಪ್ತಿಯುಳ್ಳ, ಸಿವಿಲ್ ನ್ಯಾಯಾಲಯಕ್ಕಿಂತ ಕೆಳಗಿನದಲ್ಲದ ಅಂಥ ಇತರ ನ್ಯಾಯಾಲಯವು, ಯಾವುದೇ ಮುಟ್ಟುಗೋಲಿನ ಬಗ್ಗೆ ನ್ಯಾಯನಿರ್ಣಯ ಮಾಡಬಹುದು, ಅಥವಾ ಖರ್ಚುಗಳ ಸಂದಾಯದ ಬಗ್ಗೆ ಆದೇಶಿಸಬಹುದು.

18. ವಶಪಡಿಸಿಕೊಂಡ ಶಿಶು ಹಾಲಿನ ಬದಲಿ ಉತ್ಪನ್ನಗಳ ಅಥವಾ ಫೀಡಿಂಗ್ ಬಾಟಲುಗಳ ಅಥವಾ ಶಿಶು ಆಹಾರ ಅಥವಾ ಅದರ ಕಂಟೇನರ್‌ನ ಒಡೆಯನಿಗೆ ಒಂದು ಅವಕಾಶ ನೀಡುವುದು:- (1) ಶಿಶು ಹಾಲಿನ ಬದಲಿ ಉತ್ಪನ್ನ ಅಥವಾ ಫೀಡಿಂಗ್ ಬಾಟಲು ಅಥವಾ ಶಿಶು ಆಹಾರ ಅಥವಾ ಅದರ ಕಂಟೇನರ್‌ನ ಒಡೆಯನಿಗೆ ಅಂಥ ಬದಲಿ ಹಾಲು ಉತ್ಪನ್ನ ಅಥವಾ ಬಾಟಲು ಅಥವಾ ಆಹಾರ ಅಥವಾ ಅದರ ಕಂಟೇನರುಗಳನ್ನು ವಶಪಡಿಸಿಕೊಳ್ಳಲು ಉದ್ದೇಶಿಸಿರುವ ಕಾರಣಗಳನ್ನು ತಿಳಿಸಿ ಲಿಖಿತದಲ್ಲಿ ಒಂದು ನೋಟೀಸನ್ನು ಕೊಟ್ಟ ಹೊರತು ಮತ್ತು ಮುಟ್ಟುಗೋಲಿನ ವಿರುದ್ಧ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೂಕ್ತ ಸಮಯದೊಳಗೆ ಲಿಖಿತದಲ್ಲಿ ಮನವಿ ಸಲ್ಲಿಸಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು ಮತ್ತು ಈ ವಿಷಯದಲ್ಲಿ ಅವನು ತನ್ನ ಅಹವಾಲನ್ನು ಹೇಳಿಕೊಳ್ಳಲು ಇಷ್ಟಪಟ್ಟಲ್ಲಿ ಹಾಗೆ ಮಾಡಲು ಒಂದು ಅವಕಾಶ ಕೊಟ್ಟ ಹೊರತು, ಮುಟ್ಟುಗೋಲಿನ ನ್ಯಾಯ ನಿರ್ಣಯದ ಅಥವಾ ಅದರ ಖರ್ಚನ್ನು ಸಂದಾಯ ಮಾಡುವುದನ್ನು ನಿರ್ದೇಶಿಸುವ ಯಾವುದೇ ಆದೇಶ ಮಾಡತಕ್ಕದ್ದಲ್ಲ:

ಪರಂತು, ಅಂಥ ಶಿಶು ಹಾಲಿನ ಬದಲಿ ಉತ್ಪನ್ನ ಅಥವಾ ಫೀಡಿಂಗ್ ಬಾಟಲು ಅಥವಾ ಶಿಶು ಆಹಾರ ಅಥವಾ ಅದರ ಕಂಟೇನರನ್ನು ವಶಪಡಿಸಿಕೊಂಡ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಅಂಥ ನೋಟೀಸನ್ನು ಕೊಡದಿದ್ದಲ್ಲಿ, ಅಂಥ ಬದಲಿ ಹಾಲು ಉತ್ಪನ್ನ ಅಥವಾ ಬಾಟಲು ಅಥವಾ ಆಹಾರ ಅಥವಾ ಅದರ ಕಂಟೇನರನ್ನು ಆ ಅವಧಿಯು ಮುಕ್ತಾಯವಾದ ಮೇಲೆ ಯಾರ ಸ್ವಾಧೀನದಿಂದ ಅವುಗಳನ್ನು ವಶಪಡಿಸಿಕೊಳ್ಳಲಾಗಿತ್ತೋ ಆ ವ್ಯಕ್ತಿಗೆ ಹಿಂತಿರುಗಿಸತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ ಉಪಬಂಧಗಳು, ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ವ್ಯವಹರಣೆಗೆ ಅನ್ವಯವಾಗತಕ್ಕದ್ದು.

19. ಅಪೀಲು:- (1) ಮುಟ್ಟುಗೋಲಿನ ನ್ಯಾಯ ನಿರ್ಣಯದಿಂದ ಅಥವಾ ಖರ್ಚನ್ನು ಸಂದಾಯ ಮಾಡಬೇಕೆಂದು ಆದೇಶಿಸುವ ನ್ಯಾಯಾಲಯದ ಯಾವುದೇ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ನ್ಯಾಯಾಲಯದ ತೀರ್ಮಾನವನ್ನು ಯಾವ ನ್ಯಾಯಾಲಯದಲ್ಲಿ ಮಾಡಲಾಗುತ್ತದೆಯೋ ಆ ನ್ಯಾಯಾಲಯಕ್ಕೆ ಒಂದು ಅಪೀಲನ್ನು ಸಲ್ಲಿಸಬಹುದು.

(2) ಅಪೀಲುದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶ ಕೊಟ್ಟ ತರುವಾಯ, ಅಪೀಲು ನ್ಯಾಯಾಲಯವು, ಅಪೀಲು ಮಾಡಿಕೊಂಡ ತೀರ್ಮಾನ ಅಥವಾ ಆದೇಶದ ವಿರುದ್ಧ ತಾನು ಸೂಕ್ತವೆಂದು ಭಾವಿಸುವಂತೆ ಅದನ್ನು ಸ್ಥಿರೀಕರಿಸುವ, ಮಾರ್ಪಾಡುಗೊಳಿಸುವ ಅಥವಾ ಪರಿಷ್ಕರಿಸುವಂಥ ಆದೇಶವನ್ನು ಹೊರಡಿಸಬಹುದು, ಅಥವಾ ಅವಶ್ಯವಾದರೆ ಹೆಚ್ಚಿನ ಸಾಕ್ಷ್ಯವೇನಾದರೂ ಇದ್ದರೆ, ಅದನ್ನು ಗಮನಿಸಿದ ತರುವಾಯ ಸಂದರ್ಭಾನುಸಾರ ಹೊಸ ತೀರ್ಮಾನ ಅಥವಾ ನ್ಯಾಯ ನಿರ್ಣಯಕ್ಕಾಗಿ ತಾನು ಸೂಕ್ತವೆಂದು ಯೋಚಿಸಬಹುದಾದಂಥ ನಿರ್ದೇಶನಗಳೊಂದಿಗೆ ಆ ಪ್ರಕರಣವನ್ನು ಹಿಂತಿರುಗಿ ಕಳುಹಿಸಿ ಕೊಡಬಹುದು:

ಪರಂತು, ಅಪೀಲುದಾರನಿಗೆ ತನ್ನ ಮನವಿ ಸಲ್ಲಿಸಲು ಸೂಕ್ತ ಅವಕಾಶವನ್ನು ಕೊಟ್ಟ ಹೊರತು ಮತ್ತು ಅವನು ತನ್ನ ಪ್ರತಿ ರಕ್ಷಣೆಯಲ್ಲಿ ಅಹವಾಲನ್ನು ಹೇಳಿಕೊಳ್ಳಲು ಇಚ್ಛಿಸಿದರೆ ಹಾಗೆ ಮಾಡಲು ಅವನಿಗೆ ಒಂದು ಅವಕಾಶ ಕೊಟ್ಟ ಹೊರತು ಈ ಪ್ರಕರಣದ ಮೇರೆಗೆ ಮುಟ್ಟುಗೋಲಿಗೆ ಬದಲಾಗಿ ಯಾವುದೇ ಜುಲ್ಮಾನೆಯನ್ನು ಹೆಚ್ಚಿಸುವ ಅಥವಾ ಹೆಚ್ಚಿನ ಮೌಲ್ಯದ ಸರಕುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶವನ್ನು ಮಾಡತಕ್ಕದ್ದಲ್ಲ.

(3) (2)ನೇ ಉಪ-ಪ್ರಕರಣದ ಮೇರೆಗೆ ನ್ಯಾಯಾಲಯವು ಮಾಡಿದ ಆದೇಶದ ವಿರುದ್ಧ ಯಾವುದೇ ಹೆಚ್ಚಿನ ಅಪೀಲು ಹೂಡತಕ್ಕದ್ದಲ್ಲ.

20. ದಂಡ:- (1) ಈ ಅಧಿನಿಯಮದ 3, 4, 5, 7, 8, 9, 10 ಅಥವಾ 11ನೇ ಪ್ರಕರಣದ (2)ನೇ ಉಪ-ಪ್ರಕರಣದ ಮತ್ತು 26ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಈ ಅಧಿನಿಯಮದ 6ನೇ ಪ್ರಕರಣದ ಅಥವಾ 11ನೇ ಪ್ರಕರಣದ (1)ನೇ ಉಪ-ಪ್ರಕರಣದ ಮತ್ತು 26ನೇ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಆರು ತಿಂಗಳಿಗೆ ಕಡಿಮೆಯಲ್ಲದ, ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯವು ತೀರ್ಪಿನಲ್ಲಿ ನಮೂದಿಸಬೇಕಾದ ಯಾವುದೇ ಪರ್ಯಾಪ್ತ ಹಾಗೂ ವಿಶೇಷ ಕಾರಣಗಳಿಗಾಗಿ, ಮೂರು ತಿಂಗಳಿಗೆ ಕಡಿಮೆಯಲ್ಲದ ಆದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಜುಲ್ಮಾನೆಯನ್ನು ವಿಧಿಸಬಹುದು.

21. ಅಪರಾಧಗಳ ಸಂಜ್ಞೇಯತೆ:- (1) ದಂಡ ಪ್ರಕ್ರಿಯಾ ಸಂಹಿತೆ, 1973ರ 173ನೇ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವ ನ್ಯಾಯಾಲಯವೂ,-

(ಎ) ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, 1954 (1954ರ 37)ರ 20ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಈ ಸಂಬಂಧದಲ್ಲಿ ಅಧಿಕೃತಗೊಳಿಸಲಾದ ಒಬ್ಬ ವ್ಯಕ್ತಿ; ಅಥವಾ

(ಬಿ) ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಸಂಬಂಧದಲ್ಲಿ ಅಧಿಕೃತಗೊಳಿಸಲಾದ 1ನೇ ದರ್ಜೆಯ ಅಧಿಕಾರಿಗಿಂತ ಕಡಿಮೆ ದರ್ಜೆಯಲ್ಲದ ಒಬ್ಬ ಅಧಿಕಾರಿ; ಅಥವಾ

(ಸಿ) ಈ ಸಂಬಂಧದಲ್ಲಿ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದ ಮಕ್ಕಳ ಕಲ್ಯಾಣ ಮತ್ತು ಅಭಿವೃದ್ಧಿ ಹಾಗೂ ಮಕ್ಕಳ ಪೋಷಣೆಯ ಕ್ಷೇತ್ರದಲ್ಲಿ ತೊಡಗಿರುವಂಥ ಸ್ವಯಂ ಸೇವಾ ಸಂಸ್ಥೆಯ ಒಬ್ಬ ಪ್ರತಿನಿಧಿ

- ಇವರು ಮಾಡಿದ ಲಿಖಿತ ದೂರಿನ ಮೇಲಲ್ಲದೆ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗೆ ಅಧಿಕೃತಗೊಳಿಸಲಾದ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಯು ದೂರನ್ನು ಸಲ್ಲಿಸಿರುವಲ್ಲಿ ಮತ್ತು ನ್ಯಾಯಾಲಯವು ಸಂದರ್ಭಾನುಸಾರ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 204ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸಮನುಗಳನ್ನು ಅಥವಾ ಒಂದು ವಾರಂಟನ್ನು ಹೊರಡಿಸಿರುವಲ್ಲಿ, ಆ ನ್ಯಾಯಾಲಯದ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರು ಆ ಪ್ರಕರಣವನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಪ್ರಾಸಿಕ್ಯೂಷನ್ ನಡೆಸತಕ್ಕದ್ದು.

22. ಕಂಪನಿಗಳಿಂದ ಅಪರಾಧಗಳು:- (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಹಾಗೂ ಅಪರಾಧ ನಡೆದ ಸಮಯದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರ ಅವರು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು, ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಈ ಉಪ-ಪ್ರಕರಣದಲ್ಲಿ ಇರುವುದಾವುದೂ ಅವನನ್ನು ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) " ಕಂಪನಿ " ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮ್ ಇಲ್ಲವೆ ವ್ಯಕ್ತಿಗಳ ಇತರ ಸಂಘವು ಇದರಲ್ಲಿ ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮ್‌ಗೆ ಸಂಬಂಧಿಸಿದಂತೆ, " ನಿರ್ದೇಶಕ " ಎಂದರೆ, ಆ ಫರ್ಮ್‌ನ ಪಾಲುದಾರ.

23. ಅಪರಾಧಗಳು ಸಂಜ್ಞೇಯವಾಗಿರುವುದು ಹಾಗೂ ಜಾಮೀನೀಯವಾಗಿರುವುದು:- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾಗಬಹುದಾದ ಅಪರಾಧವು,-

(ಎ) ಜಾಮೀನೀಯವಾಗಿರತಕ್ಕದ್ದು;

(ಬಿ) ಸಂಜ್ಞೇಯವಾಗಿರತಕ್ಕದ್ದು.

24. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ:- ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯಸರ್ಕಾರದ ಅಥವಾ 21ನೇ ಪ್ರಕರಣದ (1)ನೇ ಉಪ ಪ್ರಕರಣದ (ಸಿ) ಖಂಡದ ಮೇರೆಗೆ ಅಧಿಸೂಚಿತವಾಗಿರುವ ಅಂಥ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಯಾವುದೇ ಕ್ರಮ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯದ ಬಗ್ಗೆ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕದ್ದಲ್ಲ.

25. 1954ರ ಅಧಿನಿಯಮ ಸಂಖ್ಯೆ 37ರ ಅನ್ವಯವನ್ನು ಪ್ರತಿಬಂಧಿಸಿಲ್ಲ:- ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳು ಆಹಾರ ಕಲಬೆರಕೆ ಪ್ರತಿಬಂಧಕ ಅಧಿನಿಯಮ, 1954ರ ಜೊತೆಗೆ ಅಧಿಕವಾಗಿರಬೇಕೇ ಹೊರತು ಅಲ್ಪೀಕರಿಸುವಂಥದ್ದಾಗಿರತಕ್ಕದ್ದಲ್ಲ.

26. ನಿಯಮ ರಚನಾಧಿಕಾರ:- (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 5ನೇ ಪ್ರಕರಣದ (ಬಿ) ಖಂಡದ ಪರಂತುಕದ ಮೇಲೆ ಶೈಕ್ಷಣಿಕ ಸಲಕರಣೆ ಮತ್ತು ಇತರ ವಸ್ತುಗಳನ್ನು ಯಾವ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ದೇಣಿಗೆಯಾಗಿ ಕೊಡುವುದು ಅಥವಾ ವಿತರಿಸುವುದು;

(ಬಿ) 6ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೋಟೀಸಿನ ಮತ್ತು ಇತರ ವಿವರಗಳನ್ನು ಸೂಚಿಸತಕ್ಕ ಭಾಷೆ;

(ಸಿ) 6ನೇ ಪ್ರಕರಣದ (1)ನೇ ಉಪ-ಪ್ರಕರಣದ (i)ನೇ ಖಂಡದ ಮೇರೆಗೆ ಸೂಚಿಸತಕ್ಕ ವಿವರಣೆಗಳು;

(ಡಿ) 6ನೇ ಪ್ರಕರಣದ (2)ನೇ ಉಪ-ಪ್ರಕರಣದ (ಡಿ) ಖಂಡದ ಮೇರೆಗೆ ಕಂಟೇನರು ಅಥವಾ ಗುರುತು ಚಿಹ್ನೆಯು ಹೊಂದಿರಬಾರದಂತಹ ವಿವರಗಳು;

(ಇ) 7ನೇ ಪ್ರಕರಣದ (1)ನೇ ಉಪ-ಪ್ರಕರಣದ (ಜಿ) ಖಂಡದ ಮೇರೆಗೆ ಗರ್ಭಿಣಿ ಸ್ತ್ರೀ ಅಥವಾ ಶಿಶುಗಳ ತಾಯಂದಿರಿಗೆ ತಿಳಿವಳಿಕೆ ನೀಡುವಂಥ ಮಾಹಿತಿಯು ಒಳಗೊಂಡಿರಬೇಕಾದ ವಿಷಯಗಳು;

(ಎಫ್) ಅಗತ್ಯಪಡಿಸಬಹುದಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ನಿರಂತರವಾಗಿ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನವು ಅಥವಾ ನಿರಂತರ ಅಧಿವೇಶನದ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡು ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು ಆ ತರುವಾಯ, ಸಂದರ್ಭಾನುಸಾರ, ಹಾಗೆ ಮಾರ್ಪಾಡಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗದಂತೆ ಇರತಕ್ಕದ್ದು.

*        *        *

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು. WD-3920/ DPAL/ C7